'ಹೌದು ಸರ್.'

'ಗುಡ್ ಬೈ ಡಿಯರ್!' ಎನ್ನುತ್ತಾ ಮಿಸೆಸ್ ಫೋಸ್ಟರ್ ಕಾರಿನೊಳಗೆ ಬಾಗಿ ಗಂಡನ ಗಡ್ಡದ ಮೇಲೆ ಒಂದು ಮುತ್ತನ್ನು ಒತ್ತಿದಳು.

'ಗುಡ್ ಬೈ. ಹ್ಯಾವ್ ಎ ಗುಡ್ ಟ್ರಿಪ್.'

ಕಾರು ಹೊರಟಿತು. ಮಿಸೆಸ್ ಫೋಸ್ಟರ್ ಒಬ್ಬಳೇ ಏರ್‌ಪೋರ್ಟಿನಲ್ಲಿ ಉಳಿದಳು.

ಅಂದು ಮಿಸೆಸ್ ಫೋಸ್ಟರಳ ಜೀವಮಾನದಲ್ಲಿ ಎಂದೂ ಮರೆಯಲಾಗದ ದಿನ. ಕೌಂಟರಿನ ಬಳಿಯ ಸೋಫಾದಲ್ಲಿ ಆಸೀನಳಾಗಿ ಅವಳು ಟಿಕೆಟ್ ಕ್ಲರ್ಕ್ ಎಲ್ಲಿ ತನ್ನನ್ನು ಮರೆತುಬಿಡುವನೋ ಎಂಬಂತೆ ಅವನ ಮೇಲೆಯೇ ಒಂದು ಕಣ್ಣಿಟ್ಟು ಪ್ರತಿ ಅರ್ಧ ಗಂಟೆಗೊಮ್ಮೆ ವಾತಾವರಣ ತಿಳಿಯಾಗಿದೆಯೇ ಎಂದು ಅವನ ತಲೆ ತಿನ್ನ ತೊಡಗಿದಳು. ಪ್ರತಿಬಾರಿಯೂ ಅವಳಿಗೆ ಅದೇ ಉತ್ತರ ಸಿಗುತ್ತಿತ್ತು: 'ವಾತಾವರಣ ಯಾವುದೇ ಗಳಿಗೆಯಲ್ಲೂ ತಿಳಿಯಾಗುವ ಸಂಭವವಿದೆ. ನೀವು ಎಲ್ಲೂ ಹೋಗಬೇಡಿ. ಅಲ್ಲಿಯೇ ಕುಳಿತಿರಿ.'

ಸಂಜೆ ಆರು ಗಂಟೆಗೆ ಅವಳ ಫ್ಲೈಟ್ ರದ್ದು ಮಾಡಲಾಗಿದೆ ಎಂದು ಅಧಿಕೃತವಾಗಿ ತಿಳಿಸಲಾಯಿತು. ಪ್ಯಾರಿಸಿಗೆ ಹೋಗುವ ವಿಮಾನವನ್ನು ಮಾರನೆಯ ದಿನ ಬೆಳಿಗ್ಗೆ ಹನ್ನೊಂದಕ್ಕೆ ಮುಂದೂಡಲಾಗಿತ್ತು.

ಮಿಸೆಸ್ ಫೋಸ್ಟರಳಿಗೆ ಈಗ ಏನು ಮಾಡುವುದು ಎಂದು ತೋಚಲಿಲ್ಲ. ಅಂದಿನ ರಾತ್ರಿ ಎಲ್ಲಿ ಕಳೆಯುವುದು ಎಂದು ಗೊತ್ತಾಗದೆ ಅಲ್ಲೇ ಅರ್ಧ ಗಂಟೆ ಕಳೆದಳು. ಏರ್‌ಪೋರ್ಟ್ ಬಿಟ್ಟು ಹೋಗಲು ಅವಳಿಗೆ ಖಂಡಿತವಾಗಿಯೂ ಮನಸ್ಸಿರಲಿಲ್ಲ. ಗಂಡ ಹೇಗಾದರೂ ಮಾಡಿ ತಾನು ಪ್ಯಾರಿಸಿಗೆ ಹೋಗುವುದನ್ನು ತಡೆಯುತ್ತಾನೆಂದು ಅವಳ ನಂಬಿಕೆಯಾಗಿತ್ತು. ಈಗ ಕುಳಿತಿದ್ದ ಜಾಗದಲ್ಲೆ ಕುಳಿತು ರಾತ್ರಿ ಕಳೆಯಲು ಅವಳು ಮಾನಸಿಕವಾಗಿ ತಯಾರಾಗಿದ್ದರೂ ದೈಹಿಕವಾಗಿ ಅವಳು ತುಂಬಾ ಆಯಾಸಗೊಂಡಿದ್ದಳು. ಸಾರ್ವಜನಿಕ ದೂರವಾಣಿಯಿಂದ ಅವಳು ಮನೆಗೆ ಫೋನಾಯಿಸಿದಳು.

ಕ್ಲಬ್ಬಿಗೆ ಹೋಗಲು ತಯಾರಾಗುತ್ತಿದ್ದ ಮಿಸ್ಟರ್ ಫೋಸ್ಟರ್ ಫೋನನ್ನು ಎತ್ತಿದರು. ಅವಳು ಎಲ್ಲವನ್ನೂ ವಿವರಿಸಿ ಮನೆಯಲ್ಲಿ ಆಳುಗಳಿದ್ದಾರೆಯೇ ಎಂದು ಕೇಳಿದಳು.

'ಆಳುಗಳನ್ನೆಲ್ಲಾ ಆಗಲೇ ಕಳುಹಿಸಿಬಿಟ್ಟೆ.' ಮಿಸ್ಟರ್ ಫೋಸ್ಟರ್ ಹೇಳಿದರು.

'ಹಾಗಾದರೆ ನಾನು ಇಲ್ಲಿಯೇ ಎಲ್ಲಾದರೂ ಉಳಿದುಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳುತ್ತೇನೆ ಡಿಯರ್...' ಆಕೆ ಹೇಳಿದಳು.

'**Foolish!**' ಮಿಸ್ಟರ್ ಫೋಸ್ಟರ್ ಚೀರಾಡಿದರು. 'ಇಷ್ಟು ದೊಡ್ಡ ಮನೆ ಇದೆ.'

'ಅದು ಖಾಲಿ ಮನೆ ಡಿಯರ್!...' ಮಿಸೆಸ್ ಫೋಸ್ಟರ್ ಅಳು ಮೋರೆ ಮಾಡಿಕೊಂಡು ಹೇಳಿದಳು.

'ನಿನಗಾಗಿ ನಾನಿಂದು ಕ್ಲಬ್ಬಿಗೆ ಹೋಗುವುದಿಲ್ಲ, ಆಯ್ತೇ?'

'ಅಲ್ಲಿ ತಿನ್ನುವುದಕ್ಕೂ ಏನೂ ಇಲ್ಲ!'

'ಹಾಗಾದರೆ ಊಟ ಮಾಡಿಕೊಂಡೇ ಬಾ ಮಾರಾಯ್ತಿ. ಅದೇ ಒಂದು ದೊಡ್ಡ ಸಮಸ್ಯೆ ಎಂದು ಹೇಳಬೇಡ.'

'ಸಾರಿ ಡಿಯರ್... ನಾನು ಇಲ್ಲೇ ಒಂದು ಸ್ಯಾಂಡ್‌ವಿಚ್ಚೋ ಮತ್ತೇನೋ ತಿಂದು ಬರುತ್ತೇನೆ.'

ಮಂಜು ತಿಳಿಯಾಗುತ್ತಲಿತ್ತಾದರೂ ಅವಳ ಟ್ಯಾಕ್ಸಿ ಮನೆಗೆ ತಲುಪುವಾಗ ಸುಮಾರು